

ಕುವೆಂಪು ಅಧ್ಯಯನ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಕೋ. ಚೆನ್ನಬಸಪ್ಪ, ಕಡಿದಾಳ್ ಮಂಜಪ್ಪ, ಜಿ.ಎಸ್. ಶಿವರುದ್ರಪ್ಪ ಹಾಗೂ ಎಸ್. ರಾಮೇಗೌಡ ಅವರೊಂದಿಗೆ ಸುಮತೀಂದ್ರ ನಾಡಿಗರು.

ಚಿಂತನೆಯ ಮುಂದುವರಿಕೆಯಾಗಿಯೇ ಬಂದುವು. ಈ ಮಧ್ಯೆ ಮಾಲತಿ ಸಂಪಾದಿಸಿದ ಕಾವ್ಯ-ವಿಮರ್ಶಾಕೃತಿ, ಆಯೋಜಿಸಿದ ಉತ್ತಮ ಕಾರ್ಯಕ್ರಮ ಹಾಗೂ 'ಪಂಚಭೂತಗಳ'ನ್ನು ಕುರಿತು ಡಾ. ಜಿ.ಬಿ. ಹರೀಶರು 'ಆಕಾಶಕ್ಕೆ ಆಶ್ಚರ್ಯ' ಬರೆದಾಗ ಸ್ವಲ್ಪ ನೆಮ್ಮದಿ ಅನುಭವಿಸಿದ್ದ. ಆದರೂ ಹಲವು ದಟ್ಟ ನಿರಾಶೆ, ಹತಾಶೆಗಳು ಅವನಲ್ಲಿ ಬೇರೂರಿದ್ದುವು.

* * *

ನಾಡಿಗನಿಗೆ ಪುತ್ತೂರು ಕರ್ನಾಟಕ ಸಂಘದವರು ಪ್ರತಿಷ್ಠಿತ 'ನಿರಂಜನ ಪ್ರಶಸ್ತಿ' ಕೊಡಲು ನಿರ್ಧರಿಸಿದ್ದರು. ನಾಡಿಗನ ಬಗ್ಗೆ ಅಭಿನಂದನ ಭಾಷಣ ಮಾಡಲು ನಾನು ಹೋಗಿದ್ದೆ (2006 ಸೆಪ್ಟಂಬರ್ 6). ವಿವೇಕಾನಂದ ಕಾಲೇಜಿನಲ್ಲಿ ದೊಡ್ಡ ಸಮಾರಂಭ ಏರ್ಪಡಿಸಿದ್ದರು. ಊರಿನ ಪ್ರಮುಖರೆಲ್ಲ ನೆರೆದಿದ್ದರು. ಡಾ. ವಸಂತಕುಮಾರ ತಾಳ್ತಜೆಯವರ ಅಧ್ಯಕ್ಷತೆಯಲ್ಲಿ ನಾಡಿಗನನ್ನು ಅದ್ದೂರಿಯಿಂದ ಸನ್ಮಾನಿಸಿ, ಪ್ರಶಸ್ತಿ ಫಲಕ ನೀಡಿದರು. ನಾಡಿಗ ನಿರಂಜನರೊಡನೆ ಹೊಂದಿದ್ದ ತನ್ನ ಆಪ್ತತೆ, ಈ ನಾಡಿನ ಜನರ ಪ್ರೀತಿ, ತನಗೆ ಸಿಗುತ್ತಿರುವ ಸನ್ಮಾನ ಮುಂತಾದ್ದು ಮಾತಾಡಿ, ತನ್ನ ಪ್ರೀತಿಯ ಎರಡು ಕವಿತೆಗಳನ್ನು ವಾಚಿಸಿದ. ಸಂವಾದದಲ್ಲಿ ನಾಡಿಗ ಮೊದಲಿಗಿಂತ ಹೆಚ್ಚು ಮಿಂಚಿದ. ಪ್ರಶ್ನೆಗಳಿಗೆ ಅವನು ಉತ್ತರಿಸುವ ಆಪ್ತ ಧಾಟಿ ಎಲ್ಲರನ್ನೂ ಹಿಡಿದಿಟ್ಟಿತು. ಸಂಜೆ ಪುತ್ತೂರಿನ ಪ್ರಸಿದ್ಧ ಕರ್ನಾಟಕ ಸಂಘದಲ್ಲಿ ಲಕ್ಷ್ಮೀಶ ತೋಳ್ಪಾಡಿಯವರ ಅಧ್ಯಕ್ಷತೆಯಲ್ಲಿ ನಾಡಿಗನ ಮಾತು ಮೌಲಿಕವಾಗಿದ್ದುವು.

* * *

ನಾಡಿಗನ ಮಾತಿನಲ್ಲಿ, ಬರವಣಿಗೆಯಲ್ಲಿ ಇಂಥ ನೇರತನ, ದಿಟ್ಟತನ ಮೊದಲಿನಿಂದಲೂ ಇತ್ತು. ಅವನ ಇಂಥ ನಡೆ, ಲೇಖನವೇ ಅವನ ದಾರಿಯಲ್ಲಿ ಮುಳ್ಳು ಹರಡಿದ್ದು ಕಂಡಿದ್ದೇನೆ. ಅನೇಕ ಸಂಗಾತಿಗಳು ಅವನನ್ನು ಮುಂದೆ ಪ್ರಶಂಸಿಸುತ್ತ, ಹಿಂದೆ ತಮ್ಮ ಸ್ವಾರ್ಥದ ಒಳ/ಅಡ್ಡದಾರಿ ಸಲೀಸುಗೊಳಿಸಿಕೊಳ್ಳುತ್ತಿದ್ದರು. ಅಂಥ ಸಂದರ್ಭದಲ್ಲಿಯೇ 'ಗಾಂಧಿಬಜಾರ್' ಪತ್ರಿಕೆಯಲ್ಲಿ ನಾಡಿಗನ ಒಂದು ಮಹತ್ವದ ಲೇಖನ ಪ್ರಕಟವಾಗಿತ್ತು. ಕೆ.ಎಸ್. ನಿಸಾರ್ ಅಹಮದ್‌ರ 'ನಿತ್ಯೋತ್ಸವ' ಕುರಿತು ನಾಡಿಗ ಬರೆದ (2007 ಜನವರಿ, 3) ದಿಟ್ಟ, ನೇರ, ಚೊಕ್ಕ, ಸತ್ಯದ ಲೇಖನವನ್ನು ಎಲ್ಲರೂ ಮೆಚ್ಚಿದರು; 'ನಾಡಿಗನ ಲೇಖನವನ್ನು' ಸಾಕಷ್ಟು ಪ್ರಚುರಪಡಿಸಿದರು, ಆದರೆ 'ನಾಡಿಗನನ್ನು' ಮೆಚ್ಚಿ ಮಾತನಾಡಲಿಲ್ಲ. ಈ ಸಂಗತಿ ಸಹ ನಮ್ಮ ಕನ್ನಡ ವಿಮರ್ಶಾಲೋಕದ ನಿತ್ಯೋತ್ಸವ ಎಂದು ನಾಡಿಗ ಟೀಕಿಸಿದ.

* * *

ಒಮ್ಮೆ ನಾಡಿಗ ನನ್ನನ್ನು ತನ್ನ ಮನೆಗೇ ಕರೆದುಕೊಂಡು ಹೋದ. ಕಲಕತ್ತೆಯಲ್ಲಿ ಶಿಕ್ಷಣ ಪಡೆದಿದ್ದ ಮಗ ಅಪೂರ್ವನಿಗೆ ಮುಂದಿನ ವರ್ಷ ಮದುವೆ ಮಾಡಲಿದ್ದ. 'ಮಗನಿಗೆ ಉಪದೇಶ' ಎಂಬ ಅರ್ಥದಲ್ಲಿ ಬರೆದಿದ್ದ 10-12 ಪದ್ಯಗಳನ್ನು ಓದಿ ಹೇಳಿದ. ತನ್ನ ವೈವಾಹಿಕ ಜೀವನದ ಅನುಭವ, ಸಫಲತೆ, ವಿಫಲತೆ, ನಿರೀಕ್ಷೆ, ಆಕಾಂಕ್ಷೆಗಳ ಮೇಳ ಕವನಗಳಲ್ಲಿ ಲಾಳಿಯಾಡುತ್ತಿತ್ತು. ನಿರಂತರ ಬರವಣಿಗೆ ಅವನನ್ನು ರಕ್ಷಿಸಿತ್ತು. ಮೊದಲಿನಿಂದಲೂ ತನ್ನ ನೈಜ ಅನುಭವಗಳಿಗೆ ಕಾವ್ಯದ ತೊಡುಗೆ ತೊಡಿಸುತ್ತ ಬಂದಿದ್ದ. 'ದಾಂಪತ್ಯಗೀತ'ದ